<u>ಸ್ತ್ರೀ ಶಕ್ತಿ ಯೋಜನೆ</u> :

465 (5024) ಶ್ರೀ ಕೃಷ್ಣಮೂರ್ತಿ :– ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 2005–06ನೇ ಸಾಲಿನಲ್ಲಿ ಹೊಸದಾಗಿ ನೊಂದಾಯಿಸಿದ ಸ್ತ್ರೀಶಕ್ತಿ ಸಂಘಗಳೆಷ್ಟು;

2) ಸುತ್ತುನಿಧಿ ಮಂಜೂರು ಮಾಡಿರುವುದೆಷ್ಟು;

3) ಕಡೂರು ತಾಲ್ಲೂಕಿಗೆ ನಿಗದಿ ಮಾಡಿರುವುದೆಷ್ಟು?

ಶ್ರೀಮತಿ ಭಾಗೀರಥಿ ಮರುಳ ಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

1) 2005–06ನೇ ಸಾಲಿನಲ್ಲಿ ಗ್ರಾಮೀಣ ಸ್ತ್ರೀ ಶಕ್ತಿ ಯೋಜನೆಯಡಿ ಹೊಸದಾಗಿ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿರುವುದಿಲ್ಲ. ನಗರ ಸ್ತ್ರೀ ಶಕ್ತಿ ಯೋಜನೆಯಡಿ 14 ಗುಂಪುಗಳು ರಚಿಸಲ್ಪಟ್ಟಿವೆ.

2) ಗ್ರಾಮೀಣ ಸ್ತ್ರೀ ಶಕ್ತಿ ಯೋಜನೆಯಡಿ ಹೊಸದಾಗಿ ಗುಂಪುಗಳು ರಚನೆಯಾಗದಿರುವುದರಿಂದ ಸುತ್ತುನಿಧಿ ಮಂಜೂರು ಮಾಡಿರುವುದಿಲ್ಲ. ನಗರ ಸ್ತ್ರೀ ಶಕ್ತಿ ಯೋಜನೆಯಡಿ ಸುತ್ತುನಿಧಿ ಮಂಜೂರು ಮಾಡಿರುವುದಿಲ್ಲ.

3) ಕಡೂರು ತಾಲ್ಲೂಕಿಗೆ 2005–06ನೇ ಸಾಲಿನಲ್ಲಿ ಹೊಸದಾಗಿ ಗುಂಪು ರಚಿಸದೆ ಇರುವುದರಿಂದ ಗುರಿ ನಿಗದಿಪಡಿಸಿರುವುದಿಲ್ಲ. ನಗರ ಸ್ತ್ರೀ ಶಕ್ತಿ ಯೋಜನೆಯಡಿ 10 ಸ್ವಸಹಾಯ ಗುಂಪುಗಳ ಗುರಿ ನಿಗದಿಪಡಿಸಿದೆ.

4693 (5090) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05, 2005–06 ಈ ಸಾಲಿನಲ್ಲಿ ಜಲಾನಯನ ಅಭಿವೃದ್ಧಿಗೆ ಬಿಡುಗಡೆಯಾದ ಹಣವೆಷ್ಟು;

ಆ) ಧಾರವಾಡ ಜಿಲ್ಲೆಯಲ್ಲಿರುವ ಯಾವ ಯಾವ ತಾಲ್ಲೂಕಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು);

ಇ) ವಿವಿಧ ಯೋಜನೆಗಳಲ್ಲಿ ಡಿಪಿಎಪಿಗೆ ಧಾರವಾಡ ಜಿಲ್ಲೆಗೆ ಬಿಡುಗಡೆಯಾದ ಹಣವೆಷ್ಟು, (ತಾಲ್ಲೂಕುವಾರು ವಿವರ ನೀಡುವುದು);